# ಕರ್ನಾಟಕ ಸರ್ಕಾರ

ಸಂಖ್ಯೆ:ಗ್ರಾಅಪ:101 :ಸುಗ್ರಾಯೋ:2008

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:20-01-2009.

ಇಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ,
ಬೆಂಗಳೂರು.

ಇವರಿಗೆ:

ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ್.

ಮಾನ್ಯರೇ,

ವಿಷಯ: ಸುವರ್ಣ ಗ್ರಾಮೋದಯ ಯೋಜನೆಯಡಿ ಆಯ್ಕೆ ಮಾಡುವ ಜನಸಂಖ್ಯೆಯ ಗರಿಷ್ಠ ಮಿತಿಯನ್ನು ಸಡಿಲಗೊಳಿಸುವ ಕುರಿತು.

ಉಲ್ಲೇಖ:ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರ ಅರೆ ಸರ್ಕಾರಿ ಪತ್ರ ಮತ್ತು ಸರ್ಕಾರದ ಪತ್ರ.

-00-

ಉಲ್ಲೇಖಿತ ಸರ್ಕಾರಿ ಪತ್ರಗಳಲ್ಲಿ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು 3ನೇ ಹಂತದ ಸುವರ್ಣ ಗ್ರಾಮೋದಯ ಯೋಜನೆಯಡಿ ಆಯ್ಕೆ ಮಾಡುವ ಗ್ರಾಮಗಳ ಜನಸಂಖ್ಯೆಯ ಗರಿಷ್ಠ ಮಿತಿಯನ್ನು 8000 ಕ್ಕೆ ನಿಗದಿಗೊಳಿಸಿ ಆದೇಶಿಸಲಾಗಿತ್ತು. ಆದರೆ, ಕ್ಷೇತ್ರದಲ್ಲಿನ ವಸ್ತುಸ್ಥಿತಿಯ ಆಧಾರದ ಮೇರೆಗೆ ಈ ನಿಯಮವನ್ನು ಸಡಿಲಗೊಳಿಸುವುದು ಅಗತ್ಯ ಕಂಡು ಬಂದಿರುವುದರಿಂದ ಗರಿಷ್ಠ ಜನಸಂಖ್ಯೆ 8000ದ ಮಿತಿಯನ್ನು ಕೈಬಿಡಲಾಗಿದೆ.

ಗ್ರಾಮಗಳ ಆಯ್ಕೆ ಕುರಿತು ಸ್ಥಳೀಯ ಮುಖಂಡರೊಡನೆ ಮತ್ತು ಚುನಾಯಿತಿ ಜನ ಪ್ರತಿನಿಧಿಗಳೊಂದಿಗೆ ಚರ್ಚಿಸಿ ಗ್ರಾಮಗಳ ಪಟ್ಟಿಯನ್ನು ಸರ್ಕಾರಕ್ಕೆ ಸಲ್ಲಿಸಲು ಕೋರಲಾಗಿತ್ತು. ಆದರೆ ಈ ಪ್ರಕ್ರಿಯೆಯಿಂದ ಆಯ್ಕೆ ವಿಳಂಬವಾಗುವುದರಿಂದ ಸ್ಥಳೀಯ ಚುನಾಯಿತ ಶಾಸಕರ ಶಿಫಾರಸ್ಸಿನೊಂದಿಗೆ ಮಾತ್ರ ಆಯ್ಕೆ ಪಟ್ಟಿ ಅಂತಿಮಗೊಳಿಸಿ ಉಸ್ತುವಾರಿ ಸಚಿವರ ಮುಖಾಂತರ ಸರ್ಕಾರಕ್ಕೆ ಸಲ್ಲಿಸಲು ಕೋರಿದೆ.

ತಮ್ಮ ನಂಬುಗೆಯ,

(ಡಾ: ಶಮ್ಲಾ ಇಕ್ಬಾಲ್ )
ನಿರ್ದೇಶಕರು,ಸ್ವ.ಉ.ಕಾ
ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

10

3